ಅಸಲು ದಾವಾ ಃ 111/2011

ಪಿ.ಡಬ್ಲ್ಯೂ.1

ಸಾಕ್ಷಿಯನ್ನು ದಿನಾಂಕ ಃ 16.11.2017 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ. ಹೆಚ್ ಎಲ್ ವಿ ಆರ್ ರವರಿಂದ

ನನ್ನ ತಂದೆಯ ಹೆಸರು ಖರೀಂ ಸಾಬ್. ತಾತನ ಹೆಸರು ಇಮಾಮ್ ಸಾಬ್. ನಮ್ಮ ತಾತನ ಹೆಸರು ಇಮಾಮ್ ಸಾಬ್ ಅಲ್ಲ ಎಂದರೆ ಸರಿಯಲ್ಲ. ವಾದಿ ಹಾಕಿರುವ ದಾವೆಯ ದಾವಾ ಸ್ವತ್ತಿನ ಸರ್ವೆ ನಂ. ನನಗೆ ಗೊತ್ತು. ಅದರ ಸರ್ವೆ ನಂ.252. ಸದರಿ ಸರ್ವೆ ನಂ. 252 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಈ ಪ್ರಕರಣದಲ್ಲಿ 4 ಎಕರೆ ಸಂಬಂಧಿಸಿದಂತೆ ದಾವೆ ಹೂಡಿರುತ್ತಾರೆ. 4 ಎಕರೆ ಜಮೀನು ಹಿಂಡಿಸ್ಗೇರೆ ಕಾವಲಿನಲ್ಲಿದೆ. ಈ ಮೊದಲು ದಾವಾ ಜಮೀನು ಸರ್ಕಾರಿ ಜಮೀನು ಆಗಿತ್ತು ಎಂದರೆ ಸರಿ. ಮೊದಲಿಗೆ ದಾವಾ ಜಮೀನನ್ನೂ ವಾದಿಯ ತಂದೆಯೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಜಮೀನ್ನನ್ನೂ ಬಹಳ ದಿನಗಳಿಂದ ತಾವು ಸಾಗುವಳಿ ಮಾಡಿಕೊಂಡು ಬಂದಿದ್ದಕ್ಕಾಗಿ ವಾದಿಯ ತಂದೆಯವರು ತಹಶೀಲ್ದಾರ್ ರವರಿಗೆ ದಾವಾ ಜಮೀನ್ನನ್ನೂ ತಮಗೆ ಮಂಜೂರು ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯ ಆಧಾರದ ಮೇಲೆ ತಹಶೀಲ್ದಾರ್ ರವರು ದಾವಾ ಜಮೀನ್ನನ್ನೂ ವಾದಿಯ ತಂದೆಯವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಂಜೂರಿಯ ದಿನಾಂಕದಿಂದ ವಾದಿಯ ತಂದೆಯವರು ತಾವು ಮರಣ ಹೊಂದುವ ಕಾಲದವರೆಗೂ ದಾವಾ ಜಮೀನಿನ ಸ್ವಾಧೀನಾನುಭವದಲ್ಲಿ ಇದ್ದು ಅದಕ್ಕೆ ಸಂಬಂದಿಸಿದ ತೆರಿಗೆಯನ್ನು ಅವರೇ ತುಂಬುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅಬ್ದುಲ್ ಖರೀಂ ಸಾಬ್ ರವರ ಮರಣದ ನಂತರ ಅವರ 3 ಜನ ಮಕ್ಕಳಾದ ವಾದಿಗಳೇ ದಾವಾ ಜಮೀನಿನಲ್ಲಿ ಈಗಲೂ ಖಬ್ಜ ವಹಿವಾಟಿನಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಖರೀಂ ಸಾಬ್ ರವರ ತಂದೆಯ ಹೆಸರು ಪಕ್ರುದ್ದೀನ್ ಸಾಬ್ ಎಂದರೆ ಸರಿಯಲ್ಲ. ಸದರಿ ಪಕ್ರುದ್ದೀನ್ ಸಾಬ್ ರವರಿಗೆ 6 ಜನ ಮಕ್ಕಳು ಎಂದರೆ ಸರಿಯ್ಲ. ಸದರಿ 6 ಜನ ಮಕ್ಕಳಲ್ಲಿ ಮೊದಲನೇಯವರು ಅಬ್ದುಲ್ ಖರೀಂ, ಮೊಹಿದ್ದೀನ್, ಯೂರುಸಾಬ್, ಫಕ್ರುದ್ದೀನ್, ಅಜೀಜ್ ಮತ್ತು ಖಲಂಧರ್ ಎಂದರೆ ಸರಿ. ನನ್ನ ತಂದೆಯ ಹೆಸರು ಖರೀಂಸಾಬ್, ಆದರೇ ನಾನು ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮಿಲ್ ಆಗಿ ನನ್ನ ತಂದೆಯ ಹೆಸರಿನ ಮುಂದೆ ಅಬ್ದುಲ್ ಎಂದು ಸೇರಿಸಿ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣದ ಪೈಕಿ 2 ಎಕರೆ ಜಮೀನಿಗೆ ಸಂಬಂಧಿಸಿದಂತೆ ಖಾತೆ-ಪಹಣಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ವಿಷಯದ ಸಂಬಂಧ ವಾದಿಗಳು ತಹಶೀಲ್ದಾರ್ ಕಛೇರಿಗೆ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲೂ ಸಹ ತಹಶೀಲ್ದಾರ್‌ರರು ನಮ್ಮೊಂದಿಗೆ ಶಾಮೀಲ್ ಆಗಿ ನನ್ನ ಪರ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಹಶೀಲ್ದಾರ್‌ರರ ಆದೇಶದ ವಿರುದ್ಧ ವಾದಿಗಳು ಎ ಸಿ ನ್ಯಾಯಾಲಯದಲ್ಲಿ ಆರ್ ಆರ್ ಟಿ ಅಪೀಲು ನಂ. 127/12-13 ರಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಮತ್ತು ಅದು ಇನ್ನೂ ವಿಚಾರಣೆಯ ಹಂತದಲ್ಲಿ ಇದೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಿಭಾಗ ಮಾಡಿಕೊಂಡಿದ್ದಕ್ಕೆ ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೆ.

ನಾವು ವಾದಿಗಳ ವಿರುದ್ಧ ಯಾವುದೇ ಆರ್ ಆರ್ ಟಿ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಬ್ದುಲ್ ಖರೀಂ ಸಾಬ್ ರವರಿಗೂ ಮತ್ತು ನಮಗೂ ಯಾವುದೇ ರೀತಿಯ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಬ್ದುಲ್ ಖರೀಂ ಸಾಬ್ ರವರು ನಮ್ಮನ್ನೂ ಜಮೀನು ನೋಡಿಕೊಳ್ಳಲು ಬಿಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಬ್ದುಲ್ ಖರೀಂ ಸಾಬ್ ರವರು ನನಗೆ ದಾವಾ ಜಮೀನ್ನನ್ನೂ ಬಿಟ್ಟುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ವಾದಿಗಳೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಮತ್ತು ದಾವಾ

ಜಮೀನಿಗೆ ಸಂಬಸಿದಂತೆ ತೆರಿಗೆಯನ್ನು ಸಹ ಸರ್ಕಾರಕ್ಕೆ ಇಂದಿಗೂ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ನಾವು ದಾವಾ ಜಮೀನನ್ನೂ ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ವಿಭಾಗ ಪತ್ರ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೈಕಿ 2 ಎಕರೆ ಜಮೀನ್ನನ್ನೂ 6ನೇ ಪ್ರತಿವಾದಿಗೆ ಮಾರಾಟ ಮಾಡಲು ನನಗೆ ಯಾವುದೇ ಅಧಿಕಾರ, ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ 25 ವರ್ಷಗಳ ಹಿಂದೆಯೇ ದಾವಾ ಜಮೀನಿಗೆ ಸಂಬಂಧಿಸಿದಂತೆ ನನಗೆ ಹೆಸರಿಗೆ ಖಾತೆ-ಪಹಣಿ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 25 ವರ್ಷಗಳ ಹಿಂದೆಯೇ ದಾವಾ ಸ್ವತ್ತಿಗೆ ಸಂಬಂದಿಸಿದ ಖಾತೆ-ಪಹಣಿಗಳು ನನ್ನ ಹೆಸರಿಗೆ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಯನ್ನು ಸೃಷ್ಟಿಸಿ ನಾನು ಕಲ್ಪತರು, ಬ್ಯಾಂಕ್, ಮಾವಿನಹಳ್ಳಿ ಶಾಖೆನಲ್ಲಿ 85 ಸಾವಿರ ರೂ.ಗಳನ್ನು ದಾವಾ ಆಸ್ತಿಯ ಮೇಲೆ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಹೇಳಲು ಬರುತ್ತದೆ, ಪೂರ್ವಕ್ಕೆ : ಆಕೀಲ್ ರವರ ಜಮೀನು, ಪಶ್ಚಿಮಕ್ಕೆ : ಜಯ ರವರ ಜಮೀನು, ಉತ್ತರಕ್ಕೆ : ಮುನಾವರ್ ರವರ ಜಮೀನು, ದಕ್ಷಿಣಕ್ಕೆ : ನಿಸಾರ್ ರವರ ಜಮೀನು ಬರುತ್ತದೆ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಅಧಿಕಾರ, ಹಕ್ಕು ಇಲ್ಲ ನನಗೂ ಮತ್ತು ಅಬ್ದುಲ್ ಖರೀಂ ಸಾಬ್ ರವರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಸರಿ ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಗುಬ್ಬಿ